## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಾಗಿ "ಗೌರ್ನಿಂಗ್ ಬಾಡಿ/ಗೌರ್ನಿಂಗ್ ಕೌನ್ಸಿಲ್" ಮತ್ತು "ಎಕ್ಸಿಕ್ಯೂಟಿವ್ ಕಮಿಟಿ" ಗಳಿಗೆ ಪದಾಧಿಕಾರಿಗಳನ್ನು ನಾಮ ನಿರ್ದೇಶನ ಮಾಡುವ ಕುರಿತು.

ಓದಲಾಗಿದೆ:

1. ಸಚಿವ ಸಂಪುಟದ ನಿರ್ಣಯದ ದಿನಾಂಕ: 25-05-2015.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 22 ತಾಪಸ 2013, ದಿನಾಂಕ: 10-06-2015.

ಪ್ರಸ್ತಾವನೆ:

ಓದಲಾದ (1)ರ ಸಚಿವ ಸಂಪುಟದ ತೀರ್ಮಾನದಂತೆ ಈಗಾಗಲೇ ಓದಲಾದ(2)ರ ಸರ್ಕಾರಿ ಆದೇಶದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು "ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ" ಎಂದು ಮರು ನಾಮಕರಣವನ್ನು ಮಾಡಲಾಗಿದೆ. ಇದಲ್ಲದೇ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯನ್ನು ಕರ್ನಾಟಕ ಸೊಸೈಟಿ ಕಾಯ್ದೆಯಡಿಯಲ್ಲಿ, ಸೊಸೈಟಿಯಾಗಿ ನೋಂದಣಿ ಮಾಡಿಸಲು ಅನುಮೋದನೆ ನೀಡಲಾಗಿದೆ. ಸದರಿ ಸಂಸ್ಥೆಯನ್ನು ನೋಂದಣಿ ಮಾಡಿಸಲು ಕರ್ನಾಟಕ ಸೊಸೈಟಿ ನೋಂದಣಿ ಕಾಯ್ದೆಯ ಪ್ರಕಾರ ರಚಿಸಲಾಗಿರುವ ಉಪವಿಧಿಗಳ ಪ್ರಕಾರ ಸಂಸ್ಥೆಗೆ "ಗೌರ್ನಿಂಗ್ ಕೌನ್ಸಿಲ್/ಗೌರ್ನಿಂಗ್ ಬಾಡಿ" ಮತ್ತು "ಕಾರ್ಯಕಾರಿ ಸಮಿತಿ"ಯನ್ನು ರಚಿಸಬೇಕಾಗಿದೆ. ಈ ಸಮಿತಿಗಳಿಗೆ ಸರ್ಕಾರವು ಸರದಿಯಾನುಸಾರ ರಾಜ್ಯದಲ್ಲಿನ ಎರಡು ವಿಶ್ವವಿದ್ಯಾಲಯಗಳ ಪ್ರತಿನಿಧಿಗಳನ್ನು, ಸರದಿಯಾನುಸಾರ ಒಬ್ಬರು ಜಿಲ್ಲಾ ಪಂಚಾಯತಿ ಅಧ್ಯಕ್ಷರನ್ನು, ಸರದಿಯಾನುಸಾರ ಇಬ್ಬರು ತಾಲ್ಲೂಕು ಪಂಚಾಯತಿ ಅಧ್ಯಕ್ಷರನ್ನು, ಸರದಿಯಾನುಸಾರ ನಾಲ್ಕು ಗ್ರಾಮ ಪಂಚಾಯತಿ ಅಧ್ಯಕ್ಷರನ್ನು ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರನ್ನು "ಗೌರ್ನಿಂಗ್ ಕೌನ್ಸಿಲ್/ಗೌರ್ನಿಂಗ್ ಬಾಡಿ"ಗೆ ನೇಮಿಸಬೇಕಾಗಿದೆ. ಮುಂದುವರೆದು, ಕಾರ್ಯಕಾರಿ ಸಮಿತಿಗೆ ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ತಜ್ಞರನ್ನು ನೇಮಿಸುವ ಅಗತ್ಯವಿರುತ್ತದೆ. ಅದಕ್ಕಾಗಿ ಈ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 22 ತಾಪಸ 2013, ದಿನಾಂಕ: 24-05-2016

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಕ್ರಮವಾಗಿ "ಗೌರ್ನಿಂಗ್ ಕೌನ್ಸಿಲ್/ಗೌರ್ನಿಂಗ್ ಬಾಡಿ"ಗೆ ಹಾಗೂ "ಕಾರ್ಯಕಾರಿ ಸಮಿತಿ"ಗೆ ಈ ಕೆಳಕಂಡ ಸದಸ್ಯರನ್ನು ನೇಮಿಸಿ ಆದೇಶಿಸಿದೆ.

| ಗೌರ್ನಿಂಗ್ ಕೌನ್ಸಿಲ್/ಗೌರ್ನಿಂಗ ಬಾಡಿ | | |
|---|---|---|
| ಕ್ರಸಂ | ಪದಾಧಿಕಾರಿಗಳು | ಪದನಾಮ |
| 14. | 1. ಡಾ. ಚಿದಾನಂದ ಪಾಟೀಲ್- ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಧಾರವಾಡ.<br>2. ಡಾ. ಓಂಕಾರ ಕಾಕಡೆ- ಪ್ರಾಧ್ಯಾಪಕರು, ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ.<br>(ಸರದಿಯಾನುಸಾರ ರಾಜ್ಯದಲ್ಲಿನ ಎರಡು ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು) | ಸದಸ್ಯರು |
| 15. | ಹಾವೇರಿ ಜಿಲ್ಲಾ ಪಂಚಾಯತಿ ಅಧ್ಯಕ್ಷರು<br>(ಸರದಿಯಾನುಸಾರ ಜಿಲ್ಲಾ ಪಂಚಾಯತಿಯ ಒಬ್ಬ ಅಧ್ಯಕ್ಷರು) | ಸದಸ್ಯರು |
| 16. | 1. ಅಧ್ಯಕ್ಷರು, ಹೊಸದುರ್ಗ ತಾಲ್ಲೂಕು ಪಂಚಾಯತಿ, ಚಿತ್ರದುರ್ಗ ಜಿಲ್ಲೆ.<br>2. ಅಧ್ಯಕ್ಷರು, ಗದಗ ತಾಲ್ಲೂಕು ಪಂಚಾಯತಿ, ಗದಗ ಜಿಲ್ಲೆ.<br>(ಸರದಿಯಾನುಸಾರ ತಾಲ್ಲೂಕು ಪಂಚಾಯತಿಗಳ ಇಬ್ಬರು ಅಧ್ಯಕ್ಷರು) | ಸದಸ್ಯರು |

| | | |
|---|---|---|
| 17. | 1. ಅಧ್ಯಕ್ಷರು, ಶಿರಗುಪ್ಪಿ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.<br>2. ಅಧ್ಯಕ್ಷರು, ಕೊಟ್ಟೆಗಾಲ ಗ್ರಾಮ ಪಂಚಾಯತಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.<br>3. ಅಧ್ಯಕ್ಷರು, ರಡ್ಡೇರನಾಗನೂರು ಗ್ರಾಮ ಪಂಚಾಯತಿ, ನರಗುಂದ ತಾಲ್ಲೂಕು, ಗದಗ ಜಿಲ್ಲೆ.<br>4. ಅಧ್ಯಕ್ಷರು, ಹಂಗಳ ಗ್ರಾಮ ಪಂಚಾಯತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ.<br>(ಸರದಿಯಾನುಸಾರ ಗ್ರಾಮ ಪಂಚಾಯತಿಗಳ ನಾಲ್ಕು ಅಧ್ಯಕ್ಷರು) | ಸದಸ್ಯರು |
| 18. | 1. ಡಾ. ಎನ್. ಪ್ರಕಾಶ್ ಭಟ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ಕಾರ್ಯದರ್ಶಿ, ಸ್ಕೋಪ್.<br>2. ಶ್ರೀ ರವೀಂದ್ರ ರೇಷ್ಮೆ, ಹಿರಿಯ ಪತ್ರಕರ್ತರು ಹಾಗೂ ನಿವೃತ್ತ ಸಸ್ಯಶಾಸ್ತ್ರ ಪ್ರಾಧ್ಯಾಪಕರು, ಮಲ್ಲೇಶ್ವರಂ, ಬೆಂಗಳೂರು.<br>(ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ತಜ್ಞರು) | ಸದಸ್ಯರು |

| ಕಾರ್ಯಕಾರಿ ಸಮಿತಿ (ಎಕ್ಸಿಕ್ಯೂಟಿವ್ ಕಮಿಟಿ) | | |
|---|---|---|
| ಕ್ರಸಂ | ಪದಾಧಿಕಾರಿಗಳು | ಪದನಾಮ |
| 10. | 1. ಶ್ರೀ ಡಿ.ಆರ್. ಪಾಟೀಲ್, ಮಾಜಿ ವಿಧಾನಸಭಾ ಸದಸ್ಯರು, ಗದಗ.<br>2. ಶ್ರೀ ವಸಂತರಾವ್ ಘೋರ್ಪಡೆ.<br>(ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರುವ ಇಬ್ಬರು ತಜ್ಞರು) | ಸದಸ್ಯರು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

24.05.16

ಇವರಿಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
3. ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ.
4. ಕಾರ್ಯದರ್ಶಿಗಳು, ಪಂಚಾಯತ್ ರಾಜ್ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ.
5. ಮಹಾ ನಿರ್ದೇಶಕರು, ರಾಷ್ಟ್ರೀಯ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಹೈದರಾಬಾದ್.
6. ಪ್ರಧಾನ ಕಾರ್ಯದರ್ಶಿ, ಆರ್ಥಿಕ/ಸಿ.ಆ.ಸು.ಇ(ಆ.ಸು)/ಯೋಜನೆ/ಕೃಷಿ/ಆರೋಗ್ಯ ಮತ್ತು ಕುಟುಂಬ ಕಲ್ಯಾಣ/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ/ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.
7. ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.
8. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
9. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
11. ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳ ಸಂಸ್ಥೆ, ಬೆಂಗಳೂರು.